# ಕರ್ನಾಟಕ ವಿಧಾನ ಪರಿಷತ್ತು

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2578

2] ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)

3] ಉತ್ತರಿಸುವ ದಿನಾಂಕ : 24/03/2022

4] ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಗಡಿ ಭಾಗದ ಪ್ರದೇಶಗಳನ್ನು ತಮ್ಮ ವ್ಯಾಪ್ತಿಯಲ್ಲಿ ಹೊಂದಿರುವ ಪೊಲೀಸ್ ಠಾಣೆಗಳು ಎಷ್ಟು; ಮತ್ತು ಅವು ಯಾವುವು; ಅವುಗಳ ವ್ಯಾಪ್ತಿಗೆ ಒಳಪಡುವ ಪ್ರದೇಶಗಳು ಯಾವುವು; | ಕೊಡಗು ಜಿಲ್ಲೆಯ ಗಡಿಭಾಗದ ಪ್ರದೇಶಗಳ ವ್ಯಾಪ್ತಿಯಲ್ಲಿ ಹೊಂದಿರುವ ಪೊಲೀಸ್ ಠಾಣೆಗಳ ಸಂಖ್ಯೆ-03 ವಿವರ ಈ ಕೆಳಕಂಡಂತಿದೆ:<br><br>**1. ಭಾಗಮಂಡಲ ಪೊಲೀಸ್ ಠಾಣೆ ಮತ್ತು ಒಳಪಡುವ ಪ್ರದೇಶಗಳು:**<br>ಭಾಗಮಂಡಲ ಪೊಲೀಸ್ ಠಾಣೆಯ ವ್ಯಾಪ್ತಿಯ ಗಡಿಭಾಗದ ಕರಿಕೆ ಗ್ರಾಮ, ಮುಂಡ್ರೋಟ್, ತಲಕಾವೇರಿ (ಚೇರಂಗಾಲ), ಕೊಳಗದಾಳು, ಬೇಂಗೂರು, ಬಿ.ಬಾಡಗ ಕೋರಂಗಾಲ, ಅಯ್ಯಂಗೇರಿ ದೊಡ್ಡಪುಲಿಕೋಟು, ಕೋಪಟ್ಟಿ, ಸಣ್ಣಪುಲಿಕೋಟು, ತಾವುರು, ಸಿಂಗತ್ತೂರು, ಕುಂದಚೇರಿ, ತಣ್ಣಿಮಾನಿ ಗ್ರಾಮಗಳು.<br><br>**2. ವಿರಾಜಪೇಟೆ ಗ್ರಾಮಾಂತರ ಠಾಣೆ ಮತ್ತು ಒಳಪಡುವ ಪ್ರದೇಶಗಳು:**<br>ವಿರಾಜಪೇಟೆ ಗ್ರಾಮಾಂತರ ಠಾಣಾ ವ್ಯಾಪ್ತಿಯ ಗಡಿಭಾಗದ ನಾಂಗಾಲ, ನಲ್ವತ್ತೋಕ್ಲು, ಹೆಗ್ಗಳ, ಕೆದಮಳ್ಳೂರು, ಚೆಂಬೆಬೆಳ್ಳೂರು, ಕಣ್ಣಂಗಾಲ, ಅರಪಟ್ಟು, ವಿ. ಬಾಡಗ, ಕಂಡಂಗಾಲ, ಕೊಳ್ತೋಡುಬೈಗೋಡು, ಬಿಟ್ಟಂಗಾಲ, ಕೊಟ್ಟೋಳಿ, ಪಾಲಂಗಾಲ, ದೇವಣಗೇರಿ, ಐಮಂಗಲ, ಮೈತಾಡಿ, ನಾಲ್ಕೇರಿ, ಕದನೂರು, ಕಡಂಗ ಮರೂರು, ಕುಂಜಿಲಗೇರಿ, ಕರಡ, ಅಮ್ಮತ್ತಿ ಕಾರ್ಮಾಡು, ಅಮ್ಮತ್ತಿ, ಕಾವಾಡಿ, ಬಿಳುಗುಂದ, ಬಾಳುಗೋಡು, ಅರಮೇರಿ, ಬೊಳ್ಳುಮಾಡು ಮತ್ತು ಹೊಸಕೋಟೆ ಗ್ರಾಮಗಳು.<br><br>ವಿರಾಜಪೇಟೆ ಗ್ರಾಮಾಂತರ ಠಾಣೆಯು ದಕ್ಷಿಣಕ್ಕೆ ಕೇರಳ ರಾಜ್ಯದ ಇರಿಟಿ ಠಾಣಾ ಸರಹದ್ದನ್ನು ಹೊಂದಿರುತ್ತದೆ.<br><br>**3. ಕುಟ್ಟ ಠಾಣೆ ಮತ್ತು ಒಳಪಡುವ ಪ್ರದೇಶಗಳು:**<br>ಕುಟ್ಟ, ಮಂಚಳ್ಳಿ, ನಾಲ್ಕೇರಿ, ಕೋತೂರು, ಕೆ. ಬಾಡಗ ಗ್ರಾಮ ಠಾಣೆಯ ಪೂರ್ವಕ್ಕೆ ಮೈಸೂರು ಜಿಲ್ಲೆಯ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ಪಶ್ಚಿಮ ಮತ್ತು ದಕ್ಷಿಣಕ್ಕೆ ಕೇರಳ ರಾಜ್ಯದ ವಯನಾಡು ಜಿಲ್ಲೆಯ ತಿರುನೆಲ್ಲಿ ಪೊಲೀಸ್ ಠಾಣಾ ಸರಹದ್ದನ್ನು ಹೊಂದಿರುತ್ತದೆ. |
| ಆ) | ಸದರಿ ಠಾಣೆಗಳಿಗೆ ಮಂಜೂರಾಗಿರುವ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು; (ವಿವರ ನೀಡುವುದು) | ಕೊಡಗು ಜಿಲ್ಲೆಯ ಗಡಿ ಭಾಗದ ಪೊಲೀಸ್ ಠಾಣೆಗಳಿಗೆ ಮಂಜೂರಾಗಿರುವ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ: |

| ಕ್ರ ಸಂ | ಗಡಿ ಭಾಗದ ಠಾಣೆಗಳು | ಮಂಜೂರಾತಿ ಬಲ | ಹಾಲಿ ಬಲ | ಖಾಲಿ ಇರುವ ಹುದ್ದೆ |
|---|---|---|---|---|
| 1. | ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆ | ಪಿಎಸ್‌ಐ-2<br>ಎಎಸ್‌ಐ-5<br>ಹೆಚ್‌ಸಿ-18<br>ಪಿಸಿ-25 | ಪಿಎಸ್‌ಐ-2<br>ಎಎಸ್‌ಐ-5<br>ಹೆಚ್‌ಸಿ-18<br>ಪಿಸಿ-23 | ಪಿಎಸ್‌ಐ-00<br>ಎಎಸ್‌ಐ-00<br>ಹೆಚ್‌ಸಿ-00<br>ಪಿಸಿ-02 |
| 2. | ಕುಟ್ಟ ಪೊಲೀಸ್ ಠಾಣೆ | ಪಿಎಸ್‌ಐ-02<br>ಎಎಸ್‌ಐ-05<br>ಹೆಚ್‌ಸಿ-09<br>ಪಿಸಿ-19 | ಪಿಎಸ್‌ಐ-01<br>ಎಎಸ್‌ಐ-05<br>ಹೆಚ್‌ಸಿ-09<br>ಪಿಸಿ-19 | ಪಿಎಸ್‌ಐ-01<br>ಎಎಸ್‌ಐ-00<br>ಹೆಚ್‌ಸಿ-00<br>ಪಿಸಿ-02 |
| 3. | ಭಾಗಮಂಡಲ ಪೊಲೀಸ್ ಠಾಣೆ | ಪಿಎಸ್‌ಐ-02<br>ಎಎಸ್‌ಐ-01<br>ಹೆಚ್‌ಸಿ-18<br>ಪಿಸಿ-28 | ಪಿಎಸ್‌ಐ-1<br>ಎಎಸ್‌ಐ-4<br>ಹೆಚ್‌ಸಿ-18<br>ಪಿಸಿ-25 | ಪಿಎಸ್‌ಐ-01<br>ಎಎಸ್‌ಐ-00<br>ಹೆಚ್‌ಸಿ-00<br>ಪಿಸಿ-03 |

<table>
<tr>
<td>ಇ)</td>
<td>ಜಿಲ್ಲೆಯ ಗಡಿಭಾಗದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಗುರುತರ ಹೊಣೆ ಹೊತ್ತಿರುವ ಎಲ್ಲಾ ಪೊಲೀಸ್ ಠಾಣೆಗಳಿಗೆ, ಅಗತ್ಯ ಕಛೇರಿಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ; (ವಿವರ ನೀಡುವುದು)</td>
<td>ಜಿಲ್ಲೆಯ ಗಡಿ ಭಾಗದಲ್ಲಿನ ಪೊಲೀಸ್ ಠಾಣೆಗಳಿಗೆ ಸ್ವಂತ ಕಟ್ಟಡಗಳಿದ್ದು, ಸುಸ್ಥಿತಿಯಲ್ಲಿರುತ್ತವೆ ಮತ್ತು ಅಗತ್ಯ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಪೀಠೋಪಕರಣಗಳು, ಸ್ಥಿರ ದೂರವಾಣಿ ಮತ್ತು ಶೌಚಾಲಯಗಳನ್ನು ಕಲ್ಪಿಸಲಾಗಿದೆ.</td>
</tr>
<tr>
<td>ಈ)</td>
<td>ಈ ಎಲ್ಲಾ ಪೊಲೀಸ್ ಠಾಣೆಗಳಿಗೆ ಪೂರ್ಣ ಪ್ರಮಾಣದಲ್ಲಿ ಸಿಬ್ಬಂದಿಗಳು ಹಾಗೂ ಅಧಿಕಾರಿಗಳನ್ನು ನಿಯುಕ್ತಿಗೊಳಿಸಲಾಗಿದೆಯೇ; (ವಿವರ ನೀಡುವುದು)</td>
<td>ಕೊಡಗು ಜಿಲ್ಲೆಯ ಗಡಿ ಭಾಗದ ಪೊಲೀಸ್ ಠಾಣೆಗಳಿಗೆ ಮಂಜೂರಾಗಿರುವ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ ಸಂ</th><th>ಗಡಿ ಭಾಗದ ಠಾಣೆಗಳು</th><th>ಮಂಜೂರಾತಿ ಬಲ</th><th>ಹಾಲಿ ಬಲ</th><th>ಖಾಲಿ ಇರುವ ಹುದ್ದೆ</th></tr>
<tr><td>1.</td><td>ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆ</td><td>ಪಿಎಸ್‌ಐ–2<br>ಎಎಸ್‌ಐ–5<br>ಹೆಚ್‌ಸಿ–18<br>ಪಿಸಿ–25</td><td>ಪಿಎಸ್‌ಐ–2<br>ಎಎಸ್‌ಐ–5<br>ಹೆಚ್‌ಸಿ–18<br>ಪಿಸಿ–23</td><td>ಪಿಎಸ್‌ಐ–00<br>ಎಎಸ್‌ಐ–00<br>ಹೆಚ್‌ಸಿ–00<br>ಪಿಸಿ–02</td></tr>
<tr><td>2.</td><td>ಕುಟ್ಟ ಪೊಲೀಸ್ ಠಾಣೆ</td><td>ಪಿಎಸ್‌ಐ–02<br>ಎಎಸ್‌ಐ–05<br>ಹೆಚ್‌ಸಿ–09<br>ಪಿಸಿ–19</td><td>ಪಿಎಸ್‌ಐ–01<br>ಎಎಸ್‌ಐ–05<br>ಹೆಚ್‌ಸಿ–09<br>ಪಿಸಿ–19</td><td>ಪಿಎಸ್‌ಐ–01<br>ಎಎಸ್‌ಐ–00<br>ಹೆಚ್‌ಸಿ–00<br>ಪಿಸಿ–02</td></tr>
<tr><td>3.</td><td>ಭಾಗಮಂಡಲ ಪೊಲೀಸ್ ಠಾಣೆ</td><td>ಪಿಎಸ್‌ಐ–02<br>ಎಎಸ್‌ಐ–01<br>ಹೆಚ್‌ಸಿ–18<br>ಪಿಸಿ–28</td><td>ಪಿಎಸ್‌ಐ–1<br>ಎಎಸ್‌ಐ–4<br>ಹೆಚ್‌ಸಿ–18<br>ಪಿಸಿ–25</td><td>ಪಿಎಸ್‌ಐ–01<br>ಎಎಸ್‌ಐ–00<br>ಹೆಚ್‌ಸಿ–00<br>ಪಿಸಿ–03</td></tr>
</table>
</td>
</tr>
<tr>
<td>ಉ)</td>
<td>ಈ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು?</td>
<td>ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಈಗಾಗಲೇ ಒಟ್ಟು 50 ಪಿ.ಎಸ್.ಐ. (ಸಿವಿಲ್) ರವರುಗಳು ಪ್ರಾಯೋಗಿಕ ತರಬೇತಿಯನ್ನು ಪಡೆಯುತ್ತಿರುತ್ತಾರೆ. ಅಲ್ಲದೇ 127 ಪಿ.ಎಸ್.ಐ. (ಸಿವಿಲ್) ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಕೊಡಗು ಜಿಲ್ಲೆಯಲ್ಲಿ ಲಭ್ಯವಿರುವ ರಿಕ್ತಸ್ಥಾನವನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.<br><br>ಕೊಡಗು ಜಿಲ್ಲಾ ಘಟಕದಲ್ಲಿ ಖಾಲಿ ಇರುವ 55–ಸಿ.ಪಿ.ಸಿ. ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಲಾಗಿದ್ದು, ಈಗಾಗಲೇ ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷೆ ಹಾಗೂ ದಾಖಲಾತಿ ಪರಿಶೀಲನೆಯು ಮುಕ್ತಾಯಗೊಂಡು ಅವರುಗಳ ದಾಖಲಾತಿಗಳ ನೈಜತೆ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆಯಲಾಗಿದ್ದು, ಅವರಿಂದ ವರದಿ ಬಂದ ಬಳಿಕ ನೇಮಕಾತಿ ಆದೇಶ ಹೊರಡಿಸಿ ಅವರುಗಳನ್ನು ಪಿ.ಸಿ. ಹುದ್ದೆಯು ಖಾಲಿ ಇರುವ ಠಾಣೆಗಳಲ್ಲಿ ನಿಯುಕ್ತಿಗೊಳಿಸಲಾಗುವುದು.</td>
</tr>
</table>

**ಸಂಖ್ಯೆ: ಹೆಚ್‌ಡಿ 60 ಪಿಒಪಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು.